**ಚಾಸಾಃ 34 ಪ್ರಾಸಾಃ 23**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 2/2022**

ಹೆಸರು :ಮಾಧವ ಗೌಡ

ತಂದೆಯ ಹೆಸರು :ಬಸಪ್ಪ ಗೌಡ

ಪ್ರಾಯ :70 ವರ್ಷ

ಉದ್ಯೋಗ :ವ್ಯವಸಾಯ

ವಾಸ :ಮರ್ಕಂಜ ಗ್ರಾಮ, ಸುಳ್ಯ ತಾಲೂಕು

**ದಿನಾಂಕ 26.05.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನನಗೆ ಚಾಸಾ–33 ಮತ್ತು 35 ರವರ ಪರಿಚಯ ಇದೆ.

ದಿಃ 25.10.2011 ಮತ್ತು ಮತ್ತು 26.10.2011 ರಂದು ಪೊಲೀಸರು ನಮ್ಮನ್ನು ಮರ್ಕಂಜ ಗ್ರಾಮ ಪಂಚಾಯಿತಿ ಪ್ರಕರಣದಲ್ಲಿ ನೊಂದ ವ್ಯಕ್ತಿಗಳ ಕೋರಿಕೆ ಸಹಿ ಅಥವಾ ಹೆಬ್ಬೆಟ್ಟು ಗುರುತುಗಳನ್ನು ಪಡೆದು ಕೊಳ್ಳಲು ನಮ್ಮನ್ನು ಕರೆಸಿದ್ದರು.

ದಿಃ 25.10.2011 ರಂದು ಚಾಸಾ–50 ರವರು ಪೊಲೀಸ್ ಠಾಣೆಯಲ್ಲಿದ್ದು, ಆ ದಿನ ಬೆಳಿಗ್ಗೆ 9 ರಿಂದ ಮಧ್ಯಾಹ್ಞ 2 ಗಂಟೆಯವರೆಗೆ ನೊಂದ ವ್ಯಕ್ತಿಗಳನ್ನು ವಿಚಾರಿಸಿ ಅವರ ಸಹಿ ಅಥವಾ ಹೆಬ್ಬೆಟ್ಟು ಗುರುತುಗಳನ್ನು ಪಡೆದುಕೊಂಡು, ಈ ಬಗ್ಗೆ ಸುಮಾರು 10 ಪಂಚನಾಮೆಗೆ ಸಹಿ ಪಡೆದುಕೊಂಡಿರುತ್ತಾರೆ. ನಂತರ 2.30 ರಿಂದ 6.30

ಗಂಟೆಯವರೆಗೆ ನೊಂದ ವ್ಯಕ್ತಿಗಳ ಸಹಿ ಅಥವಾ ಹೆಬ್ಬೆಟ್ಟು ಗುರುತುಗಳನ್ನು ಪಡೆದುಕೊಂಡು ಈ ಬಗ್ಗೆ 8 ಪಂಚನಾಮೆಗೆ ಸಹಿ ಪಡೆದುಕೊಂಡಿರುತ್ತಾರೆ. ಮಾರನೇ ದಿನ ಅಂದರೆ 26.10.2011 ರಂದು ಬೆಳಿಗ್ಗೆ 9.30 ರಿಂದ ಮದ್ಯಾಹ್ನ 2 ಗಂಟೆಯವರೆಗೆ ನೊಂದ ವ್ಯಕ್ತಿಗಳ ಸಹಿ ಅಥವಾ ಹೆಬ್ಬೆಟ್ಟು ಗುರುತುಗಳನ್ನು ಪಡೆದುಕೊಂಡು ಈ ಬಗ್ಗೆ 9 ಪಂಚನಾಮೆಗಳಿಗೆ ಸಹಿ ಪಡೆದುಕೊಂಡಿರುತ್ತಾರೆ. ನಂತರ 2.30 ರಿಂದ 3 ಗಂಟೆಯವರೆಗೆ ಒಂದು ಪಂಚನಾಮೆಗೆ ಸಹಿ ಪಡೆದುಕೊಂಡಿರುತ್ತಾರೆ. ಹೀಗೆ ಒಟ್ಟು 28 ಪಂಚನಾಮೆಗಳಿಗೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ನೊಂದವರ ಸಹಿ ಮತ್ತು ಹೆಬ್ಬೆಟ್ಟು ಗುರುತುಗಳನ್ನು ನಮ್ಮ ಸಮಕ್ಷಮ ಪಡೆದುಕೊಂಡಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಗಳನ್ನು ನೋಡುತ್ತಿದ್ದು ಅವುಗಳಲ್ಲಿ ನನ್ನ ಸಹಿಗಳನ್ನು ನೋಡಿ ಗುರುತಿಸುತ್ತೇನೆ. (ಮೂಲ ಪಂಚನಾಮೆಗಳನ್ನು ಈಗಾಗಲೇ ಪ್ರಕರಣ ಸಂಃ 348/2015 ರಲ್ಲಿ ನಿಪಿ–85 ರಿಂದ 112 ಎಂದು ಗುರುತಿಸಲಾಗಿರುತ್ತದೆ.) ಸದರಿ ಪಂಚನಾಮೆಗಳ ದೃಢೀಕೃತ ನಕಲುಗಳನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–14 ರಿಂದ 41 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿ ಸಾಕ್ಷಿಯ ಸಹಿಗಳನ್ನು ನಿಪಿ–14(ಬಿ) ಯಿಂದ 39(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ನೊಂದವರ ಸಹಿ ಅಥವಾ ಹೆಬ್ಬೆಟ್ಟುಗಳನ್ನು ಪೊಲೀಸರು ನಮ್ಮ ಸಮಕ್ಷಮ ಪಡೆದುಕೊಂಡಿರುತ್ತಾರೆ. (ಮೂಲ ದಾಖಲೆಗಳನ್ನು ಈಗಾಗಲೇ ಪ್ರಕರಣ ಸಂಃ 348/2015 ರಲ್ಲಿ ನಿಪಿ–113 ರಿಂದ 140 ಎಂದು ಗುರುತಿಸಲಾಗಿರುತ್ತದೆ.) ಸದರಿ ಸಹಿ ಅಥವಾ ಹೆಬ್ಬೆಟ್ಟುಗಳನ್ನು ಪಡೆದುಕೊಂಡ ದಾಖಲೆಗಳಿಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳ ದೃಢೀಕೃತ ನಕಲುಗಳನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಕ್ರಮವಾಗಿ ನಿಪಿ–42 ರಿಂದ 69 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ಐದು ಸಹಿಗಳನ್ನು ಒಟ್ಟಾಗಿ ನಿಪಿ–42(ಬಿ) ಯಿಂದ 67(ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ</u>**

ದಿಃ 25.10.2011 ರಂದು ನಾನು ಚಾಸಾ-33 ಮತ್ತು 35 ರವರು ಬಂದಿದ್ದೆವು. ಆ ದಿನ ಬಂದಿದ್ದ ನೊಂದ ವ್ಯಕ್ತಿಗಳ ಹೆಸರು ಈಗ ನನಗೆ ನೆನಪಿಲ್ಲ. ಆದರೆ ಅವರ ಪರಿಚಯ ಇದೆ. 14 ರಿಂದ 41 ರಲ್ಲಿ ಯಾರು ಹೆಬ್ಬೆಟ್ಟು ಗುರುತು ಹಾಕಿದ್ದಾರೆ ಮತ್ತು ಯಾರು ಸಹಿ ಹಾಕಿದ್ದಾರೆ ಎಂದು ನನಗೆ ನೆನಪಿಲ್ಲ. ಆ ದಿನ ನಮಗೆ ಲಿಖಿತ ನೋಟೀಸು ನೀಡಿರಲಿಲ್ಲ. ಪಂಚನಾಮೆಗಳನ್ನು ಕೈಯಲ್ಲಿ ಬರವಣಿಗೆ ಮಾಡಿರುತ್ತಾರೆ. ಪಂಚನಾಮೆಯಲ್ಲಿ ನೊಂದವರ ಸಮಸ್ಯೆಗಳ ಬಗ್ಗೆ ತಿಳಿಸಿರುತ್ತಾರೆ. ಆ ದಿನ ನೊಂದವರ ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಂಡಿದ್ದನ್ನು ಹೊರತು ಪಡಿಸಿ ನನ್ನ ಮುಂದೆ ಬೇರೆ ಏನು ಮಾಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು ಶಿವರಾಮಗೌಡ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳು ಎಂದರೆ ಸರಿ. ನಮ್ಮ ಆಸ್ತಿಗಳು ಒಂದೇ ವಿಭಾಗ ಪತ್ರದಲ್ಲಿ ಪಾಲಾಗಿರುತ್ತದೆ ಎಂದರೆ ಸರಿ. ವಿಭಾಗದ ಕುರಿತು ನನಗೆ ಮತ್ತು ಶಿವರಾಮಗೌಡರಿಗೆ ವಿವಾದ ಇದೆ ಎಂದರೆ ಸರಿಯಲ್ಲ. ನಾನು ಶಂಕರನಾರಾಯಣ ಶಾಸ್ತ್ರಿಯವರ ಭ್ರಷ್ಟಾಚಾರ ನಿರ್ಮೂಲನಾ ಸಮಿತಿಯಲ್ಲಿ ಇದ್ದೆ ಎಂದರೆ ಸರಿಯಲ್ಲ. ಶಂಕರನಾರಾಯಣ ಶಾಸ್ತ್ರಿ ಮತ್ತು ನಾನು ಆತ್ಮೀಯರು ಎಂದರೆ ಸರಿಯಲ್ಲ. ಶಿವರಾಮ ಗೌಡರ ನಂತರ ಪಂಚಾಯಿತಿ ಸದಸ್ಯನಾಗಿದ್ದೆ ಎಂದರೆ ಸರಿ. ಗ್ರಾಮ ಪಂಚಾಯಿತಿ ಚುನಾವಣೆಗಳು ರಾಜಕೀಯ ಪಕ್ಷದ ಬ್ಯಾನರ್ ನಲ್ಲಿ ನಡೆಯುತ್ತದೆ ಎಂದರೆ ಸರಿಯಲ್ಲ. ನಾನು ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯನಾಗಿದ್ದೆ ಎಂದರೆ ಸರಿಯಲ್ಲ. ಐದು ವರ್ಷ ಇದ್ದೆ. 2011ರಲ್ಲಿ ನಾನು ಪಂಚಾಯಿತಿ ಸದಸ್ಯ ನಾಗಿದ್ದೆ ಎಂದರೆ ಸರಿ. 2011ರಲ್ಲಿ ಶಿವರಾಮ ಗೌಡ ಬಿ.ಜೆ.ಪಿ ಪಕ್ಷದಲ್ಲಿದ್ದರು ಎಂದರೆ ಸರಿ. ನಾನು ದಿಃ 25.10.2011 ಮತ್ತು 26.10.2011ರಂದು ಸುಳ್ಯ ಪೊಲೀಸ್ ಠಾಣೆಗೆ ಹೋಗಿಲ್ಲ ಮತ್ತು ಪೊಲೀಸರು ಯಾವುದೇ ಪಂಚನಾಮೆ ಮಾಡಿ ಯಾವುದೇ ಸಹಿ ಅಥವಾ ಹೆಬ್ಬೆಟ್ಟು ಗುರುತು

ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ನೊಂದ ವ್ಯಕ್ತಿಗಳು ಯಾವುದೇ ಸಹಿ ಅಥವಾ ಹೆಬ್ಬೆಟ್ಟು ಗುರುತು ಹಾಕಿಲ್ಲ ಎಂದರೆ ಸರಿಯಲ್ಲ. ದಿಃ 25.10.2011 ಮತ್ತು 26.10.2011 ರಂದು ನಾವು ಪೊಲೀಸ್ ಠಾಣೆಗೆ ಹೋಗಿಲ್ಲ ಆದರೆ ಬೇರೆ ದಿನ ನಾವು ಪೊಲೀಸ್ ಠಾಣೆಗೆ ಹೋಗಿ ಸದರಿ ದಾಖಲೆಗೆ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನಗೆ ಮತ್ತು ಶಿವರಾಮಗೌಡರಿಗೆ ವೈಯಕ್ತಿಕವಾಗಿ ಮತ್ತು ರಾಜಕೀಯವಾಗಿ ವೈಷಮ್ಯ ಇರುವ ಕಾರಣಕ್ಕೆ ಪೊಲೀಸರು ದಾಖಲಿಸಿದ ಸುಳ್ಳು ದಾಖಲೆಗಳಿಗೆ ಸಹಿ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(2 ಮತ್ತು 3ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ